ದಿನಾಂಕಃ 14-09-2021 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು ಃ ಶ್ರೀಯುತ ಎಂ.ಹೆಚ್.ಜಿ. ವಕೀಲರಿಂದಃ**

ನಾನು ಗೋವಾದಲ್ಲಿ ವಾಸವಾಗಿರುತ್ತೇನೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ದುಡಿಯುವ ಸಲುವಾಗಿ ಹೋಗಿರುತ್ತೇನೆ ಎಂದು ಹೇಳುತ್ತಾರೆ. ನನ್ನ ತಂದೆಯವರು ಗೋವಾದಲ್ಲಿ ಇದ್ದರು ಎಂದರೆ ಸರಿಯಲ್ಲ. ನನ್ನ ತಂದೆ ಸುಮಾರು 30 ವರ್ಷಗಳ ಹಿಂದೆ ಗೋವಾಗೆ ಹೋಗಿ ಅಲ್ಲಿಯೇ ವಾಸವಾಗಿದ್ದರು ಎಂದರೆ ಸರಿಯಲ್ಲ. ದಾವಾ ಜಮೀನು ಒಟ್ಟು 6 ಎಕರೆ 15 ಗುಂಟೆ ವಿಸ್ತೀರ್ಣ ಹೊಂದಿದೆ. ದಾವಾ ಜಮೀನಿನ ಸರ್ವೆ ನಂಃ 189. ದಾವಾ ಜಮೀನು ಪ್ರಸ್ತುತ ನನ್ನ ತಂದೆಯ ಹೆಸರಿನಲ್ಲಿ ಇರುತ್ತದೆ. ಆ ರೀತಿ ದಾವಾ ಜಮೀನು ನನ್ನ ತಂದೆಯ ಹೆಸರಿನಲ್ಲಿ ಇರುವುದನ್ನು 2017 ರಲ್ಲಿ ನೋಡಿರುತ್ತೇನೆ. ನನಗೆ ದಾವಾ ಜಮೀನಿನ ಚೆಕ್ಕುಬಂದಿಗಳನ್ನು ಹೇಳಲು ಬರುವುದಿಲ್ಲ. ದಾವಾ ಜಮೀನು ಈಗಲೂ ನನ್ನ ತಂದೆಯ ಹೆಸರಿನಲ್ಲಿಯೇ ಇದೆ. ನೀವು ನ್ಯಾಯಾಲಯಕ್ಕೆ ಯಾವ ಕಾರಣಕ್ಕೆ ಬಂದಿದ್ದೀರಿ ಎಂದು ಹೇಳಲು ಬರುತ್ತದೆಯೇ ಎನ್ನುವ ಪ್ರಶ್ನೆಗೆ ದಾವಾ ಜಮೀನಿನ 4 ಎಕರೆ ವಿಸ್ತೀರ್ಣವನ್ನು 1 ನೇ ಪ್ರತಿವಾದಿಯು ತೆಗೆದುಕೊಂಡ ಮೇರೆಗೆ ಬಂದಿರುವುದಾಗಿ ನುಡಿಯುತ್ತಾರೆ. ಸದರಿ 4 ಎಕರೆ ಜಮೀನನ್ನು 1 ನೇ ಪ್ರತಿವಾದಿ ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಸದರಿ 4 ಎಕರೆ ಜಮೀನನ್ನು 1 ನೇ ಪ್ರತಿವಾದಿ ಸಾಗುವಳಿ ಮಾಡುತ್ತಿದ್ದರು, ಮಾಡುತ್ತಿರುವುದಿಲ್ಲ ಎಂದು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ನಮ್ಮ ತಂದೆಯಾದ ದ್ಯಾಮನಗೌಡ ಯಾನೆ ದ್ಯಾಮಣ್ಣ ಎನ್ನುವವರು ಜೀವನೋಪಾಯಕ್ಕಾಗಿ ದುಡಿಯಲು ಗೋವಾಗೆ ಹೋಗಿದ್ದು, ಅಲ್ಲಿಯೇ ತಾತ್ಕಾಲಿಕವಾಗಿ ವಾಸವಾಗಿರುತ್ತಾರೆ ಎಂದು ಕಾಣಿಸಿರುವುದಿಲ್ಲ. ನಿಮ್ಮ ಮುಖ್ಯ ವಿಚಾರಣೆಯ ಪ್ರಮಾಣಪತ್ರದ ಖಂಡಿಕೆ 6 ರಲ್ಲಿ ಕಾಣಿಸಿರುವ ಪಿ.ಎಲ್.ಡಿ.ಬ್ಯಾಂಕಿನ ಸಾಲವು ಎಷ್ಟು ಎಂದು ಹೇಳಲು ಬರುತ್ತದೆಯೇ ಎನ್ನುವ ಪ್ರಶ್ನೆಗೆ ಸಾಕ್ಷಿಯು 40,000/- ಎಂದು ನುಡಿಯುತ್ತಾರೆ. ಸದರಿ

ರೂ. 40,000/- ಸಾಲವನ್ನು 12 ವರ್ಷಗಳ ಹಿಂದೆ ಪಡೆದುಕೊಳ್ಳಲಾಗಿತ್ತು ಮತ್ತು 11 ವರ್ಷಗಳ ಪೂರ್ವದಲ್ಲಿ ಮರುಪಾವತಿಸಲಾಗಿರುತ್ತದೆ. ಸದರಿ ಪಿ.ಎಲ್.ಡಿ. ಬ್ಯಾಂಕಿನಲ್ಲಿ ಪಡೆದುಕೊಂಡಿದ್ದ ಸಾಲವನ್ನು ಮರುಪಾವತಿಸದ ಮೇರೆಗೆ ಬ್ಯಾಂಕಿನಿಂದ ಹರಾಜು ನೋಟೀಸು ಬಂದಿದ್ದು, ಹಾಗೆ ನೋಟೀಸು ಬಂದ ನಂತರ 1ನೇ ಪ್ರತಿವಾದಿಯು ಸದರಿ ಸಾಲವನ್ನು ಮರುಪಾವತಿಸಿರುತ್ತಾರೆ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದ ಖಂಡಿಕೆ 6 ರಲ್ಲಿ ದೊಡ್ಡಮ್ಮಳನ್ನು ನಾವೇ ಜೋಪಾನವಾಗಿ ನೋಡಿಕೊಂಡಿದ್ದೆವು ಎಂದು ಸುಳ್ಳಾಗಿ ಕಾಣಿಸಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದ ಖಂಡಿಕೆ 7 ರಲ್ಲಿ ದಾವಾ ಆಸ್ತಿಗಳು ಸಂಪೂರ್ಣವಾಗಿ ನಮ್ಮ ಕುಟುಂಬಕ್ಕೆ ಸೇರಿದವುಗಳಾಗಿರುತ್ತವೆ ಎಂದು ಪ್ರತಿವಾದಿಯರು ತಮ್ಮ ಪ್ರತಿವಾದ ಪತ್ರದಲ್ಲಿ ಒಪ್ಪಿಕೊಂಡಿರುತ್ತಾರೆ ಎಂದು ಸುಳ್ಳಾಗಿ ಕಾಣಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಪಿ.ಎಲ್.ಡಿ. ಬ್ಯಾಂಕಿನ ಸಾಲವನ್ನು 1ನೇ ಪ್ರತಿವಾದಿಯು ಮರು ಪಾವತಿಸಿದ ಮೇರೆಗೆ ದೊಡ್ಡಮ್ಮರವರು ನ್ಯಾಯಾಲಯಕ್ಕೆ ಬಂದು ಖುದ್ದಾಗಿ ಸದರಿ 4 ಎಕರೆ ಜಮೀನನನ್ನು 1ನೇ ಪ್ರತಿವಾದಿಗೆ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸುಮಾರು 20 ವರ್ಷಗಳಿಂದ ಇಲ್ಲಿಯವರೆಗೂ ದಾವಾ ಆಸ್ತಿಯನ್ನು 1ನೇ ಪ್ರತಿವಾದಿಯೇ ಸಾಗುವಳಿ ಮಾಡಿ ಅನುಭವಿಸಿಕೊಂಡು ಬರುತ್ತಿದ್ದಾರೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಇತರ ವಾದಿಯರೊಂದಿಗೆ ಸೇರಿಕೊಂಡು ಸುಳ್ಳು ದಾವೆ ಮಾಡಿರುತ್ತೇನೆ ಮತ್ತು ಆ ಕುರಿತು ಸುಳ್ಳು ಮುಖ್ಯ ವಿಚಾರಣೆಯ ಪ್ರಮಾಣಪತ್ರವನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ :-** ಇರುವುದಿಲ್ಲ.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ್ದನ್ನು ಬೆರಳಚ್ಚುಗಾರರಿಗೆ ಉಕ್ತ ಲೇಖನವನ್ನು ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ. ಹೇ. ಕೇ. ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು, ಕುಷ್ಟಗಿ.